# ಹಡದರ ನಿನ ಲಿಂಗ

ಹಡದರ ನಿನ ಲಿಂಗ
ಹರವಿಯೊಳಗಿಡಬ್ಯಾಡ
ಹರದಿ ನಿನಗಿಲ್ಲ ಮುಡಚೆಟ್ಟ
ಅಂಗಳಕ ಶರಣರು ಸುಳದು ಹೋಗ್ಯಾರ!

ಬೀಸೋಕಲ್ಲಿನ ನುಡಿಯಿದು. ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ತಾತ್ವಿಕತೆಯಿಂದಾಗಿ ಗಮನ ಸೆಳೆಯುತ್ತದೆ. ಅದೇ ತಾನೇ ಬೆಸಲೆಯಾದವಳನ್ನು ಕುರಿತು ಬಾಣಂತಿತನ ಸೂತಕವಲ್ಲ. ಮೈಲಿಗೆಯಾಯ್ತೆಂದು ಕಟ್ಟಿದ ಇಷ್ಟಲಿಂಗ ಹರವಿಯೊಳಗೆ (ಗಡಿಗೆ) ಇಡಬ್ಯಾಡ. ಏಕೆಂದರೆ ಇಷ್ಟಲಿಂಗ ಪೂಜಕರಿಗೆ ಮಡಿ, ಮೈಲಿಗೆ ಎಂಬ ಕಿಲ್ಬಿಷವಿಲ್ಲ. ಕಲ್ಯಾಣದ ಶಿವಶರಣರು ನಿಮ್ಮ ಮನೆಯ ಅಂಗಳದಲ್ಲಿ ಸುಳಿದು ಹೋಗಿದ್ದಾರಾದ್ದರಿಂದ ಜನನ ಸೂತಕ, ಮರಣ ಸೂತಕ, ಇತ್ಯಾದಿಗಳಿಲ್ಲ. ಇವೆಲ್ಲ ಪೊಳ್ಳು ಮತ್ತು ಜೀವ ವಿರೋಧಿ ಎಂದು ಹೇಳಿದವರು ಕಲ್ಯಾಣದ ಶರಣರು. ಅವರ ತತ್ವಬೆಳಕಿನಲ್ಲಿ ಕ್ರಮಿಸುವವರಿಗೆ ಇವುಗಳ ಭಯ ಬೇಡ ಎನ್ನುತ್ತಾಳೆ ಜನಪದ ಮಹಿಳೆ.

ಜಾತಿ ಮತ್ತು ಸೂತಕಗಳಿಂದಲೆ ಗುರುತಿಸಿಕೊಳ್ಳುತ್ತಿರುವ ಕರ್ಮಠ ವ್ಯವಸ್ಥೆಯನ್ನು ಶರಣರು ಧಿಕ್ಕರಿಸಿದರು. ಸಾಮಾನ್ಯವಾಗಿ ಸ್ತ್ರೀಯರ ಋತುಕ್ರಮವನ್ನು ಮೈಲಿಗೆ, ಪಾಪ ಎಂದೇ ಬಿಂಬಿಸಿಕೊಂಡು ಬರಲಾಗಿತ್ತು. ಅವಳ ಹುಟ್ಟು, ಮುಟ್ಟುಗಳನ್ನು ತುಚ್ಛೀಕರಿಸಿದ್ದಲ್ಲದೆ ಮಹಿಳೆ ಈ ಕಾರಣವಾಗಿಯೆ ಬಹಿಷ್ಕೃತೆ. ಋತುಮತಿಯಾದಾಗ, ಮಗುವಿಗೆ ಜನ್ಮ ನೀಡಿದಾಗ ಅವಳನ್ನು ಮುಟ್ಟಿಸಿಕೊಳ್ಳಬಾರದು. ಮನೆಯ ಹೊರಗೆ ಇಡಬೇಕು. ಮನೆಯ ಯಾವ ವಸ್ತುವನ್ನು ಆಕೆ ಮುಟ್ಟಬಾರದು. ಮುಟ್ಟಿದರೆ ಮಹಾ ಪಾತಕವಾದೀತು. ದೇವರು ಕೋಪಾವಿಷ್ಟರಾಗುತ್ತಾರೆ ಎಂದೆಲ್ಲ ಭಯ ಮೂಡಿಸಿ ಸ್ತ್ರೀಯರು ತಮ್ಮನ್ನು ತಾವೇ ಸ್ವತಃ ತುಚ್ಛೀಕರಿಸಿಕೊಳ್ಳುವಂತೆ ಮಾಡಲಾಗಿತ್ತು. ಆಧುನಿಕೋತ್ತರದ ಈ ಕಾಲಘಟ್ಟದಲ್ಲಿಯೂ ಗೊಲ್ಲರ ಹಟ್ಟಿಗಳಲ್ಲಿ ಋತುಸ್ರಾವ ಕಾಣಿಸಿಕೊಂಡ ಯುವತಿಯರನ್ನು ಬಾಣಂತಿಯರನ್ನು ಅವರ ಹಟ್ಟಿಗಳಿಂದ ಹೊರಗೆ ಬಯಲಲ್ಲಿ; ಮಳೆ, ಚಳಿ, ಬಿಸಿಲುಗಳ ನಡುವೆಯೂ ಕೂಡಿಸುವುದನ್ನು ನೋಡುತ್ತಿದ್ದೇವೆ. ಇಂಥಲ್ಲಿ ಮಹಿಳೆಯರು ಹುಳು ಹುಪ್ಪಡಿ ಬಾಧೆಗೊಳಗಾಗಿ, ವಿಷಮಶೀತ ಜ್ವರ, ನೆಗಡಿ ಅನೇಕ ರೋಗಗಳಿಗೆ ಬಲಿಯಾದದ್ದು ಇದೆ. ಮೌಢ್ಯಗಳನ್ನು ಹೊಡೆದೋಡಿಸಲು ಎಷ್ಟೆಲ್ಲ ಕಾನೂನು, ಆಂದೋಲನ ಮಾಡಿದಾಗಲೂ ಅನೇಕ ಕಡೆ ಕದ್ದುಮುಚ್ಚಿ ಈ ಅನಿಷ್ಟ ಪದ್ಧತಿ ನಡೆದು ಬರುತ್ತಿರುವುದು ವರದಿಯಾಗುತ್ತಲೆ ಇದೆ. ಇದಕ್ಕೆ ಕಾರಣ ನಮ್ಮೊಳಗಿನ ಅವ್ಯಕ್ತ ಭಯ. ಶೋಷಕ ವರ್ಗ ಇಂಥ ಭಯವನ್ನು ಉದ್ದೇಶಪೂರ್ವಕವಾಗಿ ತುಂಬುತ್ತದೆ.

ಹೆಣ್ಣಿನ ಶಕ್ತಿಕೇಂದ್ರವಾಗಿರುವ ಗರ್ಭಾಶಯ ಮತ್ತು ಪ್ರಕೃತಿ ಸಹಜವಾದ ಋತುಚಕ್ರವನ್ನು ಮೈಲಿಗೆಗೊಳಿಸಿ ಅದರ ಬಗೆಗೆ ಸ್ವತಃ ಸ್ತ್ರೀಯರಿಗೇನೆ ಹೇವರಿಕೆ ಹುಟ್ಟುವಂತೆ ಮಾಡುವಲ್ಲಿ ಬಹುದೊಡ್ಡ ಲಿಂಗ ರಾಜಕಾರಣವೊಂದು ಸಂಭವಿಸಿದೆ. ವರ್ಣಾಶ್ರಮ ಧರ್ಮದಲ್ಲಿ ಎಲ್ಲ ವರ್ಣಗಳ ಮಹಿಳೆಯರು ಶೂದ್ರರೇ. ಅವರಿಗೆ ದೇವರನ್ನು ಮುಟ್ಟಿ ಪೂಜಿಸುವ ಹಕ್ಕಿಲ್ಲ. ಅಂತೆಯೇ ಅವಳು ನಿತ್ಯ ನಾರಕಿ. ಪುರುಷರ ಆಧ್ಯಾತ್ಮಿಕ ಸಾಧನೆಯಲ್ಲಿ ಕಂಟಕಿ. ಈ ಕುಟಿಲ ಕುಹಕ ಕುತಂತ್ರ ತಾತ್ವಿಕತೆಯ ವಿರುದ್ಧ ಸಮರ ಸಾರಿದ 12ನೇ ಶತಮಾನದ ಶಿವಶರಣರು ಮಡಿ ಮೈಲಿಗೆಗಳ ಬಾಲಿಶ, ಅಮಾನವೀಯ ನಂಬಿಕೆಗಳಿಂದ ಜನಸಾಮಾನ್ಯರನ್ನು ಮುಕ್ತಗೊಳಿಸುವ ಆಂದೋಲನ ಮಾಡಿದ್ದರು. ಅದರ ಫಲಸ್ವರೂಪವಾಗಿಯೇ ಲಿಂಗ ಧರಿಸಿದವರು ಹೊಲೆ, ಸೂತಕಗಳ ಭ್ರಮೆಗಳಿಗೆ ಬಲಿಯಾಗಲಿಲ್ಲ. ಇಷ್ಟಲಿಂಗವೆಂಬುದು ಧಾರ್ಮಿಕ ಆಚರಣೆ ಅಥವಾ ವಿಧಿ ವಿಧಾನವಲ್ಲ. ಅದು ಅರಿವಿನ ಸಂಕೇತ. ಸರ್ವ ಸಮತೆಯಲ್ಲಿ ನಂಬಿಕೆಯುಳ್ಳವರೆಲ್ಲರೂ ಲಿಂಗ ಧರಿಸಬಹುದು. ಹೀಗೆ ಧರಿಸಿದವರು ಜಾತಿ, ಸೂತಕ, ಪಾಪ–ಪುಣ್ಯಾದಿ ಕರ್ಮಠತನಕ್ಕೆ ಬಲಿಯಾಗಬೇಕಿಲ್ಲ ಎಂದರು. ಇದೇ ಮಾತನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ

ಜನನ ಸೂತಕ, ಕುಲ ಸೂತಕ,
ಎಂಜಲಸೂತಕ ಎಂಬಿತ್ಯಾದಿ ಸರ್ವಸೂತಕಂಗಳು
ಅಂಗಲಿಂಗ ಸಂಬಂಧಿಗಳಾದ ಲಿಂಗಭಕ್ತರಿಗಿಲ್ಲ ನೋಡಾ.

ಎಂದು ಮುಂದುವರೆಯುತ್ತ... 'ಶುದ್ಧದೇಹಿಯಾದ ಭಕ್ತಂಗೆ ರಜ ಸೂತಕವೆಂಬುದೇ ಪಾತಕ ನೋಡಾ' ಎಂದು ಹೇಳುತ್ತಾರೆ. ಶಿವಶರಣರ ಈ ವೈಚಾರಿಕತೆ ಸ್ಥಳೀಯ ದುಡಿಯುವ ಜನರನ್ನು ಅಪಾರವಾಗಿ ಪ್ರಭಾವಿಸಿದೆ. ಹೀಗಾಗಿಯೇ ಜನಪದ ಮಹಿಳೆಯೊಬ್ಬಳು ಹಡೆದರೆ ಏನಾಯಿತು ಲಿಂಗವನ್ನು ಮಣ್ಣಿನ ಮಡಕೆಯಲ್ಲಿ ಇಡಬ್ಯಾಡ ಎನ್ನುತ್ತಾಳೆ. ಆ ಕಾಲದಲ್ಲಿ ಮಹಿಳೆಯರ ವಾರ್ಡ್‌ರೋಬ್‌ಗಳಂತಿದ್ದ ಅಡಕಿಲ ಗಡಿಗೆಗಳಲ್ಲಿಯೇ ಎಲ್ಲ ಅಮೂಲ್ಯ ವಸ್ತುಗಳನ್ನು ಇಡುತ್ತಿದ್ದರು. ಶರಣರ ತತ್ವಗಳು ನಂತರದ ಕಾಲಘಟ್ಟದಲ್ಲಿ ದಿಕ್ಕು ತಪ್ಪಿಸಲ್ಪಟ್ಟವು ಎಂಬುದು ಬೇರೆ ಮಾತು.

ಮಣ್ಣಿನ ಮಡಕೆಗಳನ್ನು ಐದೋ ಆರೋ ಸಾಲಿನಲ್ಲಿ ಒಂದರ ಮೇಲೊಂದು ಪೇರಿಸಿ ದೇವರ ಖೋಲಿ, ನಡುಮನಿಗಳಲ್ಲಿ ಇಡುವುದಿತ್ತು. ಇವುಗಳಲ್ಲಿಯೇ ಭತ್ತ ಭರಣ, ಹಪ್ಪಳ, ಸಂಡಿಗೆ, ಕುರುಡಿಗೆ, ಶಾವಿಗೆ ಸರ್ವೆಲ್ಲ ಸರಂಜಾಮು ಅದರಲ್ಲಿಯೂ ಚೂರು ಪಾರು, ಚುಣುಗು ಮುಣುಗು ಬಂಗಾರ, ಒಂದೆರಡು ದುಡ್ಡು ದುಗ್ಗಾಣಿ ಇಡುವುದಿತ್ತು. ಅಡಕಿಲ ಎಂಬ ಪದವನ್ನು ವೈಯಾಕರಣಿ ಕೇಶಿರಾಜ ತನ್ನ ಸೂತ್ರವೊಂದರಲ್ಲಿ ವಿಸರ್ಗದ ಸ್ವರೂಪವನ್ನು ವಿವರಿಸುವಾಗ ಹೀಗೆ ಹೇಳಿದ್ದಾನೆ 'ಸಂದಿರ್ಪುದಂತಡಕಿಲ್ವೊಂದಿರೆ ಮಣಿಗೊಪ್ಪುವೋಲ್' ವಿಸರ್ಗವು ಅಡಕಿಲ್ ಗಡಿಗೆಗಳನ್ನು ಒಂದರ ಮೇಲೊಂದು ಏರಿಸಿದಂತೆ ಸೊನ್ನೆಗಳನ್ನು ಒಂದರ ತಲೆಯ ಮೇಲೊಂದು ಇರಿಸಿದರೆ ಅದು ವಿಸರ್ಗ ಎನ್ನುತ್ತಾನೆ. 'ಅಡಕಿಲ್' ಪದ ಮತ್ತು ಅದರ ಇತಿಹಾಸ ದೀರ್ಘವಾಗಿದೆ. ಅದೇನೇ ಇರಲಿ ನಮ್ಮ ಹೆಣ್ಮಕ್ಕಳು ಹಡೆದಾಗ ಮೈಲಿಗೆಯಾದಿತೆಂದು ಲಿಂಗವನ್ನು ಕಳಚಿ ಈ ಅಡಕಿಲ ಗಡಿಗೆಯಲ್ಲಿ ಇಡುವುದಿತ್ತು.

ಶರಣ ತತ್ವಾನುಯಾಯಿಗಳಿಗೆ ಮುಡುಚೆಟ್ಟು ಎಂಬುದೇ ಇಲ್ಲ. ಇಂಥ ಮೂಢನಂಬಿಕೆಗಳ ವಿರುದ್ಧ ಸಮರ ಸಾರಿದ ಶರಣರು ಈ ನಾಡಿನ ಅಂಗಳದಲ್ಲಿ ಆಡಿ ಹೋಗಿದ್ದಾರೆ. ಅಷ್ಟೇ ಅಲ್ಲ ತತ್ವಕ್ಕಾಗಿ ಕಲ್ಯಾಣದ ಬೀದಿಯಲ್ಲಿ ಆನೆ ಕಾಲಿಗೆ ಕಟ್ಟಿಸಿಕೊಂಡು ಎಳೆದಾಡಿಸಿಕೊಂಡಿದ್ದಾರೆ. ಶರಣರ ಸಾತ್ವಿಕ ರಕ್ತ ಚೆಲ್ಲಿದ ನಾಡಲ್ಲಿ ಜನನ ಸೂತಕ ಇದ್ದಾತೆ? ಎನ್ನುತ್ತಾಳೆ ಜನಪದ ಮಹಿಳೆ.

'ಅಂಗಳಕ ಶರಣರು ಸುಳಿದು ಹೋಗ್ಯಾರ' ಎಂಬುದೇ ದೊಡ್ಡ ರೂಪಕ. ಕನ್ನಡ ನಾಡಿನ ಈ ಭೂಮಿ ಶರಣಕ್ರಾಂತಿಯ ಪ್ರಯೋಗ ನೆಲವೂ ಆಗಿದೆ. ಮಣ್ಣ ಕಣ ಕಣದಲ್ಲಿ ಕಾಯಕ, ದಾಸೋಹ ಎಂಬ ಪರಿಕಲ್ಪನೆಗಳು ಆದಾಯ, ಹಂಚಿಕೆಗಳಾಗಿ ಕಂಗೊಳಿಸಿವೆ. ಅಷ್ಟಕ್ಕೂ ಇಲ್ಲಿನವರು 'ಕಾಯಕವ ಕಲಿಸುವುದಕ್ಕೆ ನಾಯಕನು ಬಸವಣ್ಣ' ಎಂದು ಅಂದೇ ಹೇಳಿದ್ದಾರೆ. ಘನ ಗಂಭೀರವಾದ ತತ್ವವೊಂದನ್ನು ನಾಲ್ಕು ಸಾಲಿನಲ್ಲಿ ಅತ್ಯಂತ ಸರಳವಾಗಿ ಹಿಡಿದಿಟ್ಟ ಇಂಥ ಅನುಭವವಾಣಿಗಳ ಕಣಜವೇ ಇಲ್ಲಿದೆ.

■ ಮೀನಾಕ್ಷಿ ಬಾಳಿ

## ಮಾತೇ ಮುತ್ತು

- ಪ್ರತಿಭೆ ನಿಜವಾಗಿಯೂ ಒಂದು ರೀತಿಯ ದೃಷ್ಟಿ. ಅದು ಬುದ್ಧಿಯ ಕಣ್ಣಲ್ಲ; ಹೃದಯದ ಕಣ್ಣು. ಈ ಒಳಗಣ್ಣು ತೆರೆದಾಗ ವಿಶ್ವದ ಹೃದಯವೇ ತೆರೆಯುತ್ತದೆ.

  —ತೀ.ನಂ. ಶ್ರೀಕಂಠಯ್ಯ

- ನಾವು ಬಯಸಿದಂತೆ ಬದುಕುವ ಸ್ವಾತಂತ್ರ್ಯ ಯಾವತ್ತೂ ಭಯಾನಕ ಹೋರಾಟದ ಫಲವೇ ಹೊರತು ಸುಲಭಕ್ಕೆ ಸಿಗುವುದಿಲ್ಲ.

  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ಔಷಧಗಳು ರೋಗವನ್ನು ಗುಣಪಡಿಸುತ್ತವೆ. ವೈದ್ಯ ಮಾತ್ರ ರೋಗಿಯನ್ನು ಗುಣಪಡಿಸುತ್ತಾನೆ.

  —ಕಾರ್ಲ್ ಜಂಗ್

- ನಾಲ್ಕುದಿನ ದೂರ ಹೋಗಿ ನೋಡಿ ಜನ ನಿಮ್ಮನ್ನು ಮರೆತೇಬಿಡ್ತಾರೆ. ಜೀವನವಿಡೀ ಮನುಷ್ಯ ತಾನು ಎಲ್ಲರಿಗೂ ಬೇಕಾದವನು ಅನ್ನೋ ಭ್ರಮೇಲಿ ಇರ್ತಾನೆ. ಆದರೆ ನಿಜ ಏನು ಅಂದ್ರೆ ಜನರಿಗೆ ನೀವು ಇದ್ದರೂ ಇಲ್ಲದಿದ್ದರೂ ಏನೂ ವ್ಯತ್ಯಾಸ ಆಗುವುದಿಲ್ಲ.

  —ಕುವೆಂಪು